# 6

# ಯೇಸುವಿನ ಹಿಂದಿರುಗುವಿಕೆಯ ಬಗ್ಗೆ ಸುಳ್ಳು ಬೋಧನೆಗಳು

ಬೋಧಿಸಲ್ಪಡುತ್ತಿರುವ ವಿವಿಧ ವಿಚಾರಗಳು ಯೇಸುವಿನ ಹಿಂದಿರುಗುವಿಕೆಯ ಬಗ್ಗೆ ಬೈಬಲಿನ ಬೋಧನೆಗಳಿಗೆ ಹೊಂದಿಕೊಳ್ಳುವದಿಲ್ಲ. ಇವು (1) ರ್‍ಯಾಪ್ಚರ್, (2) ಯೇಸುವಿನ ಪ್ರವಾದನೆಯ ತಪ್ಪು ವ್ಯಾಖ್ಯಾನಗಳು, (3) "A.D. 70 ಥಿಯೆರಿ," ಮತ್ತು (4) ಅಂತಿಕ್ರಿಸ್ತ ಮತ್ತು ಅರ್ಮಗದ್ಯೋನದ ಬಗ್ಗೆ ಕಲ್ಪನೆ. ಪರಿಶುದ್ಧ ಬರಹಗಳ ಬೆಳಕಿನಲ್ಲಿ ಈ ಬೋಧನೆಗಳನ್ನು ವಿವೇಚಿಸೋಣ.

## ರ್‍ಯಾಪ್ಚರ್ ಇರುವುದೋ?

ಯೇಸುವಿನ ಎರಡನೆಯ ಬರೋಣದಲ್ಲಿ ಸಂಭವಿಸುವ ಘಟನೆಗಳನ್ನು ಕುರಿತು ಬೈಬಲ್ ಬೋಧನೆಯನ್ನು ನಾವು ಗಮನಿಸಿದ್ದೇವೆ. ಪ್ರಿಮಿಲ್ಲೆನ್ನಿಯಲಿಸ್ಟರು - ಯೇಸುವಿನ ಹಿಂದಿರುಗುವಿಕೆಯ ಮೊದಲು ಮಿಲ್ಲೆನ್ನಿಯಮ್ (ಭೂಲೋಕದಲ್ಲಿ ಯೇಸುವಿನ ಒಂದು ಸಾವಿರ ವರ್ಷಗಳ ಆಳ್ವಿಕೆಯು) ಬರುವುದೆಂದು ನಂಬುವವರು - ಹಲವಾರು ತೀರ್ಮಾನಗಳಿಗೆ ತಲುಪಿದ್ದಾರೆ. (1) ಯೇಸುವು ರಹಸ್ಯವಾಗಿ ಮತ್ತು ಥಕ್ಕನೇ ಆಕಾಶಗಳಲ್ಲಿ ಕಾಣಿಸಿಕೊಳ್ಳುವನು, ಜೀವಿಸುವ ನೀತಿವಂತರಿಂದ ಮತ್ತು ಸತ್ತು ಹೋದ ನೀತಿವಂತರಿಂದ ಮಾತ್ರವೇ ನೋಡಲ್ಪಡುವನು. (2) ಆತನು ಅವರನ್ನು ಒಟ್ಟಾಗಿ ತೆಗೆದುಕೊಂಡು, ಪರಲೋಕದಲ್ಲಿ ಏಳು ವರ್ಷಗಳ ವರೆಗೆ ಹೋಗುವನು. (3) ಏಳು ವರ್ಷಗಳ ಅವಧಿಯಲ್ಲಿ ಅಂತಿ ಕ್ರಿಸ್ತನು ಆಳಿಕೆ ನಡಿಸುವನು ಮತ್ತು ಮಹಾ ಹಿಂಸೆಯನ್ನು ತರುವನು. (4) ಈ ಅವಧಿಯಲ್ಲಿ ಯೆಹೂದ್ಯರು ಮಾರ್ಪಡುವರು ಮತ್ತು - ಪ್ರತಿಯಾಗಿ ಅನೇಕರನ್ನು ಮಾರ್ಪಡಿಸುವರು. (5) ಏಳು ವರ್ಷಗಳ ಅಂತ್ಯದಲ್ಲಿ ಅಂತಿ ಕ್ರಿಸ್ತನು ಅರ್ಮೆಗದ್ದೋನದ ಮಹಾ ಯುದ್ಧದಲ್ಲಿ ದೇವಜನರಿಗೆ ವಿರುದ್ಧವಾಗಿ ತನ್ನ ಸೈನ್ಯವನ್ನು ನಡಿಸುವನು. (6) ಯೇಸುವು ತನ್ನ ಭಕ್ತರೊಂದಿಗೆ ಹಿಂದಿರುಗುವನು ಮತ್ತು ಅಂತಿ ಕ್ರಿಸ್ತನನ್ನು ನಾಶ ಮಾಡುವನು, ದುಷ್ಟರಿಗೆ ನ್ಯಾಯ ತೀರಿಸಿ ದಂಡಿಸುವನು, ಹಾಗೂ ಯೆರೂಸಲೇಮಿನಲ್ಲಿ ದಾವೀದನ ಸಿಂಹಾಸದ ಮೇಲೆ ಒಂದು ಸಾವಿರ ವರ್ಷಗಳ ವರೆಗೆ ಇಡೀ ಭೂಲೋಕದ ಮೇಲೆ ಆಳ್ವಿಕೆ ಮಾಡುವನು.

ರ್‍ಯಾಪ್ಚರ್ ಬೋಧನೆಯು ಬೈಬಲಿನ ಅನೇಕ ಸಾಮಾನ್ಯ ಬೋಧನೆಗಳಿಗೆ ವಿರುದ್ಧವಾಗಿರುವುದು:

ರ್‍ಯಾಪ್ಚರ್ ಬೋಧನೆಯನ್ನು ಎತ್ತಿಹಿಡಿಯುವದಕ್ಕಾಗಿ ಉಪಯೋಗಿಸಲ್ಪಟ್ಟ ಮೆಚ್ಚಿಕೆಯ ವಾಕ್ಯವು 1 ಥೆಸಲೊನೀಕ 4:14-17, "ಕರ್ತನು ತಾನೇ ಆಜ್ಞಾ ಘೋಷದೊಡನೆಯೂ ಪ್ರಧಾನ ದೂತನ ಶಬ್ದದೊಡನೆಯೂ ದೇವರ ತುತೂರಿಧ್ವನಿಯೊಡನೆಯೂ ಬರುವನು" ಎಂದು ಅದು ಹೇಳುತ್ತದೆ. ಹೀಗಿದ್ದರೂ ಯೇಸುವು ರಹಸ್ಯವಾಗಿ ಬರಲು ಯೋಚಿಸಿದ್ದರೆ,

ಇಷ್ಟು ಬಹಳ ಗದ್ದಲಕ್ಕೆ ಆತನು ಅವಕಾಶಕೊಡುವದಿಲ್ಲ. ಆತನ ಬರೋಣವು ಫಕ್ಕನೇ ಆಗುವುದು ಆದರೆ ಒಂದು ರಹಸ್ಯವಾಗಿರುವದಿಲ್ಲ.

ಯೋಹಾನ 6:40ರ ಪ್ರಕಾರವಾಗಿ, ನೀತಿವಂತರ ದೇಹಗಳು ಕೊನೆಯ ದಿನದಲ್ಲಿ ಪುನರುತ್ಥಾನ ಹೊಂದಬೇಕಾಗಿರುವವು. ರ್‍ಯಾಪ್ಚರ್ ಸಿದ್ಧಾಂತವು ಬೋಧಿಸುವಂತೆ, ಅಂತ್ಯಕ್ಕಿಂತ ಸ್ವಲ್ಪ ಸಮಯದಿಂದ ಹಿಂಬಾಲಿಸಿ ಒಂದು ಸಾವಿರ ವರ್ಷದ ಅವಧಿಗಿಂತ ಏಳು ವರ್ಷಗಳ ಮೊದಲು ಇದು ಸಂಭವಿಸಿದರೆ ಅಂಥ ಘಟನೆಯು "ಕೊನೆಯ ದಿನದಂದು" ಪ್ರಿಮಿಲ್ಲೆನ್ನಿಯಲಿಷ್ಟರು ಹೇಳುವಂತೆ ಸಂಭವಿಸುವದಿಲ್ಲ.

ಸತ್ತವರೆಲ್ಲರೂ - ನೀತಿವಂತರೂ - ದುಷ್ಟರೂ - ಅದೇ ತಾಸಿನಲ್ಲಿ, ಅದೇ ಸಮಯದಲ್ಲಿ ಎಬ್ಬಿಸಲ್ಪಡುವರು ಎಂದು ಯೋಹಾನ 5:28, 29 ಹೇಳುತ್ತದೆ. ರ್‍ಯಾಪ್ಚರ್ ಸಿದ್ಧಾಂತವು ನೀತಿವಂತರ ಪುನರುತ್ಥಾನವನ್ನು ಒಂದು ಸಾವಿರ ವರ್ಷದ ಆಳ್ವಿಕೆಯ ಮೊದಲು, ಮತ್ತು ಅನಂತರ ದುಷ್ಟರ ಪುನರುತ್ಥಾನವನ್ನು ಇಡುತ್ತದೆ. ಎರಡು ಪ್ರತ್ಯೇಕ ವಾದ ಪುನರುತ್ಥಾನಗಳ ಬಗ್ಗೆ ಬೈಬಲ್ ಯಾವುದನ್ನೂ ಹೇಳುವದಿಲ್ಲ.

ಒಂದೇ ಸಮಯದಲ್ಲಿ, ಯುಗದ ಸಮಾಪ್ತಿಯಲ್ಲಿ ದುಷ್ಟರೂ ನೀತಿವಂತರೂ ಸುಗ್ಗಿ ಮಾಡಲ್ಪಡುವರೆಂದು ಯೇಸು ಹಣಜಿಯ ಸಾಮ್ಯದಲ್ಲಿ ಬೋಧಿಸಿದನು. ದುಷ್ಟರು ಜನರೊಳಗಿಂದ ಕೂಡಿಸಲ್ಪಟ್ಟು ದಂಡಿಸಲ್ಪಡುವರು, ಆಗ ನೀತಿವಂತರು ಯೇಸುವಿನ ರಾಜ್ಯದಲ್ಲಿ ಪ್ರಕಾಶಿಸುವರು (ಮತ್ತಾಯ 13:24-30, 36-43).

ಹಣಜಿಗಳ ಸಾಮ್ಯದಲ್ಲಿಯಂತೆಯೇ, ಯೇಸು ಬಲೆಯ ಸಾಮ್ಯದಲ್ಲಿ ಅದೇ ಪಾಠವನ್ನು ಬೋಧಿಸಿದನು. "ಹಾಗೆಯೇ ಯುಗದ ಸಮಾಪ್ತಿಯಲ್ಲಿ ಆಗುವದು. ದೇವದೂತರು ಹೊರಟು ಬಂದು ನೀತಿವಂತರೊಳಗಿಂದ ಕೆಟ್ಟವರನ್ನು ಬೇರೆಮಾಡಿ ಅವರನ್ನು ಬೆಂಕೀ ಕೊಂಡದಲ್ಲಿ ಹಾಕುವರು" (ಮತ್ತಾಯ 13:47-50). ನೀತಿವಂತರು ದುಷ್ಟರೊಳಗಿಂದ ಕೂಡಿಸಲ್ಪಡುವರು ಎಂದು ಬೋಧಿಸುವದರ ಬದಲು, ದುಷ್ಟರು ನೀತಿ ವಂತರೊಳಗಿಂದ ತೆಗೆದು ಕೊಳ್ಳಲ್ಪಡುವರು ಎಂದು ಬೋಧಿಸಿದನು.

2 ಥೆಸಲೊನೀಕ 1:6-10ರಲ್ಲಿ, ಪೌಲನು ಯೇಸುವಿನ ಸಾಮ್ಯದಲ್ಲಿ ಕಂಡು ಬಂದ ಸತ್ಯವನ್ನೆ ಬೋಧಿಸಿದನು: ಯೇಸುವು ಪುನಃ ಬರುವಾಗ ದುಷ್ಟರು ದಂಡಿಸಲ್ಪಡುವರು. "ಯೇಸುವು ದೇವರನ್ನರಿಯದವರಿಗೂ ತನ್ನ ಸುವಾರ್ತೆಗೆ ಒಳಪಡದವರಿಗೂ ಪ್ರತೀ ಕಾರವನ್ನು ಸಲ್ಲಿಸುವನು" ಎಂದು ಪೌಲನು ವಚನ 8ರಲ್ಲಿ ಹೇಳಿದ್ದಾನೆ. "ಅಂಥವರು ... ನಿತ್ಯನಾಶನವೆಂಬ ದಂಡನೆಯನ್ನು ಅನುಭವಿಸುವರು ..." ಎಂದು ವಚನ 9 ಮುಂದುವರಿಯುತ್ತದೆ.

ಎಬ್ಬಿಸಲ್ಪಡಬೇಕಾದ ಅನೇಕ ಸಹೋದರರಲ್ಲಿ ಯೇಸುವು ಮೊದಲಿಗನಾಗಿ ದ್ದಾನೆಂದು ಪೌಲನು ಬೋಧಿಸಿದನು (ರೋಮಾಪುರ 8:29). ಮುಂದಿನ ಪುನರು ತ್ಥಾನವು ಆತನು ಪುನಃ ಬರುವಾಗ ಆತನವರಾಗಿರುವವರನ್ನು ಒಳ ಗೊಂಡಿರುವುದು. ಆಗ ಅಂತ್ಯವು ಬರುವುದು. 1 ಕೊರಿಂಥ 15:22-27ರ ಪ್ರಕಾರ ಯೇಸುವು ದೇವರಿಗೆ ರಾಜ್ಯವನ್ನು ಹಿಂದಿರುಗಿ ಕೊಡುವನು. ಈ ವಾಕ್ಯವು ಒಂದು ಸಾವಿರ ವರ್ಷದ ಆಳ್ವಿಕೆಯನ್ನು ಹಿಂಬಾಲಿಸುವ ರ್‍ಯಾಪ್ಚರಿಗಾಗಿ ಸಮಯವನುವೊ ಒದಗಿಸಿಕೊಡುವದಿಲ್ಲ. ಯೇಸುವು ಹಿಂದಿರುಗಿ ಬರುವಾಗ, ಎಲ್ಲವೂ ಭೂಲೋಕದೊಳಗಿಂದ ತೆಗೆದುಕೊಳ್ಳ ಲ್ಪಡುವುದು, ಮತ್ತು ಅದು ಅಂತ್ಯವಾಗಿರುವುದು.

2 ಪೇತ್ರ 3:3-13ರಲ್ಲಿ ಪೇತ್ರನು ಯೇಸುವು ಹಿಂದಿರುಗಿ ಬರುವಾಗ ಉಷ್ಣತೆಯೊಂದಿಗೆ ಆಕಾಶಮಂಡಲವು ಮತ್ತು ಭೂಮಿಯು ಕರಗಿ ಹೋಗುವುದೆಂದು ಬೋಧಿಸಿದ್ದಾನೆ. ಈ ವಾಕ್ಯಭಾಗವು ಭೂಮಿಯ ಮೇಲಿನ ಸಾವಿರ ವರ್ಷಗಳ ಆಳ್ವಿಕೆಯನ್ನು ಹಿಂಬಾಲಿಸುವ

ರ್ಯಾಪ್ಚರಿಗಾಗಿಯೂ ಇಲ್ಲವೇ ರ್ಯಾಪ್ಚರನ್ನು ಅನುಸರಿಸಿ ಅಂಥ ಘಟನೆಗಳು ಸಂಭವಿಸುವ ಭೂಲೋಕದ ಅಸ್ತಿತ್ವಕ್ಕಾಗಿಯೂ ಅವಕಾಶ ಕೊಡುವದಿಲ್ಲ.

ರ್ಯಾಪ್ಚರಿನ ಸಿದ್ಧಾಂತವು ದಾನಿಯೇಲ 2 ಮತ್ತು 9 ಹಾಗೂ ಮತ್ತಾಯ 24, ಮಾರ್ಕ 13, ಮತ್ತು ಲೂಕ 21ರಲ್ಲಿಯ ಯೇಸುವಿನ ಪ್ರವಾದನೆಗಳ ಸಾಂಕೇತಿಕ ವಾಕ್ಯಭಾಗಗಳ ತಪ್ಪು ವ್ಯಾಖ್ಯಾನದ ಮೇಲೆ ಕಟ್ಟಲ್ಪಟ್ಟಿರುತ್ತದೆ. ಇತರ ಪರಿಶುದ್ಧ ಬರಹಗಳ ಸ್ಪಷ್ಟ ಬೋಧನೆಯನ್ನು ಅತಿಕ್ರಮಿಸುವ ಯಾವುದೇ ಸಿದ್ಧಾಂತವು ಸುಳ್ಳಾಗಿರುವಂಥದ್ದಾಗಿರುತ್ತದೆ.

## ಯೆರೂಸಲೇಮಿನ ನಾಶನ ಮತ್ತು ಯೇಸುವಿನ ಬರೋಣ

ಮತ್ತಾಯ 24, ಮಾರ್ಕ 13, ಮತ್ತು ಲೂಕ 21ರಲ್ಲಿಯ ಯೇಸುವಿನ ಪ್ರವಾದನೆಗಳು ನಮ್ಮ ಭವಿಷ್ಯದಲ್ಲಿರುವ ಯೇಸುವಿನ ಎರಡನೆಯ ಬರೋಣಕ್ಕೆ ಹೆಚ್ಚಾಗಿ ಅನ್ವಯಿಸಲ್ಪಟ್ಟಿರುವವು. ಕೆಲವು, ಅನಂತರದಲ್ಲಿ ಅವುಗಳ ಬೋಧನೆಯು ವಿವೇಚಿಸಲ್ಪಡುವುದು, ಹೆಚ್ಚಾದವುಗಳೆಲ್ಲವೂ ಕ್ರಿ.ಶ. 70ರಲ್ಲಿ ಸಂಭವಿಸಿದ ಘಟನೆಗಳಿಗೆ ಅನ್ವಯಿಸುವವು. ಈ ವ್ಯಾಖ್ಯಾನಗಳಲ್ಲಿ ಯಾವವೂ ಸರಿಯಾಗಿರುವದಿಲ್ಲ, ಯಾಕಂದರೆ ಸುವಾರ್ತೆಗಳಲ್ಲಿಯ ಪ್ರವಾದನೆಗಳು ಎರಡನ್ನೂ ಒಳಗೊಂಡಿರುತ್ತವೆ. ಮತ್ತಾಯ 24:3ರಲ್ಲಿ ಯೇಸುವು ದೇವಾಲಯದ ನಾಶನ, ಆತನ ಬರುವಿಕೆಯ ಸಂಕೇತ ಮತ್ತು ಯುಗಾಂತ್ಯದ ಬಗ್ಗೆ ತನ್ನ ಶಿಷ್ಯರ ಪ್ರಶ್ನೆಗಳಿಗೆ ಯೇಸು ಉತ್ತರ ಕೊಡುತ್ತಿದ್ದನು. ಯೆರೂಸಲೇಮಿನ ನಾಶನಕ್ಕೆ ನಡಿಸುವ ಮತ್ತು ಅದನ್ನು ಒಳಗೊಂಡಿರುವದನ್ನು ಕುರಿತು ಯೇಸುವಿನ ಮುಂತಿಳಿಸುವಿಕೆಗಳನ್ನು ಮಾತ್ರ ಲೂಕನು ದಾಖಲೆ ಮಾಡಿದ್ದಾನೆ ಮತ್ತು ಮತ್ತಾಯ ಹಾಗೂ ಮಾರ್ಕರು ಯೇಸುವಿನ ಎರಡನೆಯ ಬರೋಣವನ್ನು ಕೂಡಿಸಿದ್ದಾರೆ.

ಮತ್ತಾಯ 24ರಲ್ಲಿ ತನ್ನ ಉಪದೇಶದ ಪ್ರಾರಂಭದಲ್ಲಿ, ಯೇಸುವು ಯೆರೂಸಲೇಮಿನ ನಾಶನದವರೆಗೆ ನಡಿಸುವ ಘಟನೆಗಳನ್ನು ವಿವರಿಸಿದನು (4-14 ವಚನಗಳು). ಯೆರೂಸಲೇಮು ಸೈನ್ಯಗಳಿಂದ ಸುತ್ತುವರಿಯಲ್ಪಟ್ಟದ್ದನ್ನು ಜನರು ನೋಡುವಾಗ, ನಾಶನವು ಹತ್ತಿರವಾಗಿದೆಯೆಂಬುದಕ್ಕೆ ಇದು ಸಂಕೇತವಾಗಿದೆಯೆಂದು ಅವರು ಅರ್ಥಮಾಡಿಕೊಳ್ಳಬೇಕೆಂದು ಹೇಳಿದನು. ಅದರ ಅಂತ್ಯದೊಂದಿಗೆ ಸಂಬಂಧಿಸಿರುವ ಹಿಂಸೆಯಿಂದ ತಪ್ಪಿಸಿಕೊಳ್ಳಲು ಅವರು ಪಟ್ಟಣದಿಂದ ಓಡಿ ಹೋಗಬೇಕು (15-22 ವಚನಗಳು; ಲೂಕ 21:20-24). ಆಗ ಯೇಸು ತನ್ನ ಅನುಯಾಯಿಗಳಿಗೆ ಯೆರೂಸಲೇಮಿನ ಪತನದ ಸುತ್ತಲಿನ ಘಟನೆಗಳನ್ನು ಮತ್ತು ಇಸ್ರಾಯೇಲ ಜನಾಂಗವನ್ನು ಕುರಿತು ಸಾಮ್ಯಗಳನ್ನೂ ಮಾಹಿತಿಯನ್ನೂ ಕೊಟ್ಟನು (ವಚನ 23-34). ಇದನ್ನು ಹಿಂಬಾಲಿಸಿ, ಆತನು ತನ್ನ ಎರಡನೆಯ ಬರೋಣದ ಬಗ್ಗೆ ಚರ್ಚಿಸಿದನು (36-51 ವಚನಗಳು).

ಹಲವಾರು ಕಾರಣಗಳಿಗಾಗಿ, ವಚನ 34 ಆತನ ಉಪದೇಶದಲ್ಲಿ ತಡೆಯಲ್ಪಟ್ಟಿದ್ದನ್ನು ಸೂಚಿಸುತ್ತದೆ:

ಮೊದಲನೆಯ ಭಾಗದಲ್ಲಿ, ವಚನ 34ರ ಮೊದಲು ಯೇಸು ವಿವರಿಸಿದ್ದೆಲ್ಲವೂ ಆತನು ಮಾತಾಡುತ್ತಿದ್ದ "ಈ ಸಂತತಿಯ" ಜೀವನ ಸಮಯದಲ್ಲಿ ಸಂಭವಿಸುವುದು. ಯೇಸು ತನ್ನ ಸೇವೆಯಲ್ಲಿ ಆತನು ಮಾತಾಡುತ್ತಿರುವ ಸಮಯದಲ್ಲಿ ಜೀವದಿಂದ ಇದ್ದ ಸಂತತಿಯನ್ನು ಸಂಬಂಧಿಸಿ "ಈ ಸಂತತಿ" ಎಂಬ ಮಾತನ್ನು ಉಪಯೋಗಿಸಿದನು.[1] ಈ ಸಂಗತಿಯಲ್ಲಿ ವ್ಯತ್ಯಾಸವು ವಿಚಿತ್ರವಾಗಿ ತೋರುವುದು.

ಮೊದಲನೆಯ ಭಾಗದಲ್ಲಿ, ಆತನು "ಆ ದಿನಗಳ" ಬಗ್ಗೆ ಮಾತಾಡಿದನು (19, 22, 29 ವಚಗಳು); ವಚನ 34ರ ನಂತರ ಎರಡನೆಯ ಭಾಗವನ್ನು ಕುರಿತು, "ಆ

ದಿನದ" ಬಗ್ಗೆ ಮಾತಾಡಿದನು (ವಚನ 36). ಅಂತಿಮ ನ್ಯಾಯತೀರ್ವಿಕೆಗಾಗಿ ತನ್ನ ಬರೋಣಕ್ಕೆ ಸಂಬಂಧಿಸಿ "ಆ ದಿನ" ಇಲ್ಲವೇ "ದಿನ" ಎಂಬ ಮಾತನ್ನು ಯೇಸು ಸ್ಥಿರ ವಾಗಿ ಉಪಯೋಗಿಸಿದನು.[2]

ಯೆರೂಸಲೇಮಿನ ಪತನದ ಮೊದಲು ಬರುವ ಘಟನೆಗಳನ್ನು ಯೇಸು ಮೊದಲನೆಯ ಭಾಗದಲ್ಲಿ ವಿವರಿಸಿದನು (ವಚನಗಳು 5-14) ಮತ್ತು ನಾಶನವು ಹತ್ತಿರ ವಾಗಿತ್ತು ಎಂಬುದನ್ನು ಸೂಚಿಸುವ ಸಂಕೇತದ ಬಗ್ಗೆ ಹೇಳಿದನು (ವಚನ 15; ಲೂಕ 21:20-24ರೊಂದಿಗೆ ಹೋಲಿಸು). ಎರಡನೆಯ ಭಾಗದ "ಆ ದಿನವು" - ಆತನು ಪುನಃ ಬರುವಾಗ (ವಚನ 36) - ಒಂದು ಸಂಕೇತದಿಂದ ಇಲ್ಲವೇ ಎಚ್ಚರಿಕೆಯಿಂದ ಹಿಂಬಾಲಿಸಲ್ಪಡುವದಿಲ್ಲ, ಆದರೆ ಜಲಪ್ರಳಯವು ಬಂದ ರೀತಿಯಲ್ಲಿ ಹಾಗೂ ಕಳ್ಳನು ಬರಬಹುದಾದ ರೀತಿಯಲ್ಲಿ ಬರುವುದು (ವಚನಗಳು 36-43).

ಮೊದಲನೆಯ ಭಾಗದಲ್ಲಿ, ಸಂಕೇತವನ್ನು ಗುರಿತಿಸಿದವರು ಮತ್ತು ಅರ್ಥಮಾಡಿಕೊಂಡವರು ಓಡಿಹೋಗ ಬೇಕೆಂದು ಯೇಸು ಹೇಳಿದ್ದಾನೆ (ವಚನ 16). ಈ ಸಂಕೇತ ಮತ್ತು ಎಚ್ಚರಿಕೆಯ ಕಾರಣದಿಂದ ಯೆರೂಸಲೇಮಿನಿಂದ ಮತ್ತು ಯೂದಾಯದಿಂದ ಕ್ರೈಸ್ತರು ಸುರಕ್ಷಿತತೆಗಾಗಿ ಯೊರ್ದನ್ ದಾಟಿ ಪೆಲ್ಲಾಕ್ಕೆ ಓಡಿ ಹೋದರು[3] ಎರಡನೆಯ ಭಾಗದಲ್ಲಿ ವಿವರಿಸಲ್ಪಟ್ಟ ಘಟನೆಗಳು ಅದು ಸಂಭವಿಸುವ ವರೆಗೆ ಯಾರೂ ಅರ್ಥಮಾಡಿಕೊಳ್ಳದಷ್ಟು ಅನಿರೀಕ್ಷಿತವಾಗಿ ಸಂಭವಿಸುವವು (ವಚನ 39). ಯಾವುದೇ ಸಂಕೇತ ಕೊಡಲ್ಪಡದ್ದರಿಂದ ಯಾರೂ ಓಡಿಹೋಗುವದಿಲ್ಲ, ಆದದರಿಂದ, ಎಲ್ಲಾ ಸಮಯಗಳಲ್ಲಿ ನಾವು ಸಿದ್ಧರಾಗಿರುವ ಅಗತ್ಯತೆ ಇದೆ (ವಚನಗಳು 37-51).

ಯೆರೂಸಲೇಮಿನ ನಾಶನದ ಮೊದಲು ಬರುವವೆಂದು ಯೇಸು ಹೇಳಿದ ಘಟನೆಗ ಳನ್ನು ಆತನ ಎರಡನೆಯ ಬರೋಣಕ್ಕೆ ಹೋಲಿಸುವವರು ಯೇಸುವಿನ ಬೋಧನೆಯನ್ನು ತಪ್ಪಾಗಿ ಅನ್ವಯಿಸುತ್ತಾರೆ (ವಚನಗಳು 4-34). ಇವುಗಳನ್ನು ಆತನ ಎರಡನೆಯ ಬರೋಣದ ಸಂಕೇತಗಳಂತೆ ಉಪಯೋಗಿಸಲ್ಪಡಲಾರವು. ಯೆರೂಸಲೇಮಿನ ಮತ್ತು ಇಸ್ರಾಯೇಲಿನ ಪತನಕ್ಕೆ ನಡಿಸುವ ಘಟನೆಗಳ ವಿವರಣೆಗಳು ಅವುಗಳಾಗಿದ್ದವು.

ಮತ್ತಾಯ 24:29-31ರ ಕಾರಣದಿಂದ ಕೆಲವರು ಈ ವ್ಯಾಖ್ಯಾನಕ್ಕೆ ಆಕ್ಷೇಪಣೆ ಹೇಳುತ್ತಾರೆ. ಈ ವಚನಗಳ ಹೇಳಿಕೆಗಳನ್ನು ಅಕ್ಷರಶಃವಾಗಿ ತೆಗೆದು ಕೊಳ್ಳಬಾರದು, ಆದರೆ ಸಂಕೇತಕವಾಗಿ ತೆಗೆದು ಕೊಳ್ಳಬೇಕು ಎಂದು ತಿಳಿಯುವದರಲ್ಲಿ ಸೋತು ಹೋಗು ತ್ತಾರೆ, ಯಾಕಂದರೆ ಜನಾಂಗಗಳ ಬೀಳುವಿಕೆಯನ್ನು ವಿವರಿಸಲು ಹಳೇ ಒಡಂಬಡಿಕೆಯ ಪ್ರವಾದಿಗಳು ಉಪಯೋಗಿಸಿದ ಅಲಂಕಾರಿಕ ಭಾಷೆಯಲ್ಲಿ ಅವರು ತುಂಬಿ ಹೋಗಿದ್ದಾರೆ.[4] ಮತ್ತಾಯ 24:30ರಲ್ಲಿ ಯೆರೂಸಲೇಮಿನ ಪತನದಲ್ಲಿ ಯೇಸುವಿನ "ಬರುವಿಕೆ"ಯು ಆತನ ಎರಡನೆಯ ಬರೋಣದಂತೆ ತಿಳಿಯಲ್ಪಡಬಾರದು, ಆದರೆ ಇಸ್ರಾಯೇಲ ಜನಾಂಗದ ಮೇಲೆ ಶಿಕ್ಷೆಯೊಂದಿಗೆ ಆತನ ಬರೋಣದಂತೆ ತಿಳಿಯಲ್ಪಡಬೇಕು. "ಈ ಸಂಗತಿಗಳನ್ನು" (ಮತ್ತಾಯ 24:33) ಅವರು ನೋಡಿದಾಗ, ಆತನು ಹತ್ತಿರವಾಗಿ ರುವನು, ಯೆರೂಸಲೇಮನ್ನು ನಾಶಪಡಿಸಲು ಸಿದ್ಧನಾಗಿರುವನು ಎಂದು ಅವರು ಅರ್ಥ ಮಾಡಿಕೊಳ್ಳುವರು. ಆದಿ ಕ್ರೈಸ್ತರು ಮಾಡಿದಂತೆ ಅವರು ಬೆಟ್ಟಗಳಿಗೆ ಓಡಿ ಹೋಗುವದನ್ನು ತಿಳಿದಿರುವರು. ಈ ಪ್ರವಾದನೆಯ ಕಾರಣದಿಂದ, ಅವರು ಈ ಸಂಕೇತಗಳನ್ನು ನೋಡಿದಾಗ ಆತನು ಯೆರೂಸಲೇಮಿನ ಮೇಲೆ ಪ್ರತೀಕಾರ ಮಾಡಲು ಸಿದ್ಧನಾಗಿರುವನೆಂದು ಅವರು ಅರ್ಥ ಮಾಡಿಕೊಂಡರು. "ಆ ದಿನ"ದಂದು, ಆತನ ಎರಡನೆಯ ಬರೋಣದ ದಿನದಂದು, ಸಂಕೇತವಾಗಲೀ, ಎಚ್ಚರಿಕೆಯಾಗಲೀ ಇಲ್ಲವೇ ಓಡಿಹೋಗಲು ಅವಕಾಶವಾಗಲೀ ಇರುವದಿಲ್ಲ.

## ಕ್ರಿ.ಶ. 70 ಸಿದ್ಧಾಂತ

ಮತ್ತಾಯ 24ರ ಎಲ್ಲವನ್ನೂ ಮತ್ತು ಇತರ ವಾಕ್ಯಭಾಗಗಳನ್ನು ಕೆಲವರು ಕ್ರಿ.ಶ. 70ರಲ್ಲಿ ಯೆರೂಸಲೇಮಿನ ನಾಶನಕ್ಕೆ ಮಾತ್ರವೇ ಅನ್ವಯಿಸುತ್ತಾರೆ. ಆ ಸಮಯದಲ್ಲಿ ಯೇಸುವು ಹಿಂದಿರುಗಿ ಬಂದನು, ಸತ್ತವರೆಲ್ಲರನ್ನು ಎಬ್ಬಿಸಿದನು ಮತ್ತು ಅವರಿಗೆ ನ್ಯಾಯ ತೀರಿಸಿದನು ಎಂದು ಅವರು ನಂಬುವರು. ಅಂದಿನಿಂದ ಎಲ್ಲರೂ ಮರಣದ ಸಮಯದಲ್ಲಿ ನ್ಯಾಯತೀರ್ಪು ಹೊಂದುವರು ಮತ್ತು ಕೂಡಲೇ ಪರಲೋಕಕ್ಕೆ ಇಲ್ಲವೇ ನರಕಕ್ಕೆ ಕಳುಹಿಸಲ್ಪಡುವರು ಎಂದು ಅವರು ನಂಬುತ್ತಾರೆ.

ಈಗ ಕೊಡಲ್ಪಟ್ಟ ಮಾಹಿತಿಯು ಈ ಸಿದ್ಧಾಂತವು ಸುಳ್ಳಾಗಿದೆಯೆಂಬುದನ್ನು ಸೂಚಿಸುತ್ತದೆ. "ಕೊನೆಯ ದಿನ" ಮತ್ತು ಅದರ ಸುತ್ತಲೂ ಇರುವ ಘಟನೆಗಳು ಸಹ ಈ ತಪ್ಪಾದ ದೃಷ್ಟಿಕೋನದಿಂದ ಸಂಧಾನಕೊಳಿಸಲ್ಪಡಲಾರವು.

ತನ್ನಲ್ಲಿ ನಂಬುವವರು "ಕೊನೆಯ ದಿನದಂದು" ಎದ್ದು ಬರುವರೆಂದು ಯೇಸುವು ಹೇಳಿದನು (ಯೋಹಾನ 6:39, 40). ಯೇಸುವು ಮಾತಾಡಿದ ಮಾತು "ಕೊನೆಯ ದಿನದಂದು" ನ್ಯಾಯ ತೀರ್ವಿಕೆಯ ತಳಹದಿಯಾಗುವುದು (ಯೋಹಾನ 12:48). ಯೆರೂಸಲೇಮಿನ ನಾಶನದ ದಿನವು "ಕೊನೆಯ ದಿನ"ವಾಗಿರದು. ಯಾಕಂದರೆ ಅದರ ನಾಶನಕ್ಕೆ ಅನೇಕ ದಿನಗಳು ಹಿಂಬಾಲಿಸಿವೆ. "ಕೊನೆಯ ದಿನ" ಎಂದು ಯೇಸು ಸಂಬಂಧಿಸಿ ಹೇಳಿದ್ದು ಭೂಲೋಕದ ಚರಿತ್ರೆಯಲ್ಲಿ ಕೊನೆಯ ದಿನ, ಅದು ನಾಶಪಡಿಸಲ್ಪಡುವ ದಿನವಾಗಿದೆ, ಭೂಮಿಯು ತನ್ನ ಅಚ್ಚಿನಲ್ಲಿ ತಿರುಗದಿದ್ದರೆ, ಇನ್ನು ಮುಂದೆ ದಿನಗಳು ಇರುವದಿಲ್ಲ. ಆ "ಕೊನೆಯ ದಿನವು" ಸತ್ತವರು ಎಬ್ಬಿಸಲ್ಪಡುವ ಮತ್ತು ನ್ಯಾಯ ತೀರ್ಪು ಹೊಂದುವ ಮತ್ತು ಭೂಮಿಯ ನಾಶಪಡಿಸಲ್ಪಡುವ ದಿನವಾಗಿದೆ. ಕ್ರಿ.ಶ. 70 ಆ ದಿನವಾಗಿರುವದಿಲ್ಲ. ಯೇಸುವಿನ ಬರೋಣದ ಮತ್ತು ಆಕಾಶ, ಭೂಮಿಗಳ ನಾಶನದ ಹಿಂದಿನ "ಕೊನೆಯ ದಿನಗಳ" (2 ಪೇತ್ರ 3:3) ಘಟನೆಗಳು "ಕೊನೆಯ ದಿನಕ್ಕೆ" ನಡಿಸುವವು.

## ಅಂತಿ ಕ್ರಿಸ್ತನ ಮತ್ತು ಅರ್ಮಗೆದ್ದೋನ

ಅಂತಿಕ್ರಿಸ್ತ ಮತ್ತು ಅರ್ಮಗೆದ್ದೋನ ಯುದ್ಧದ ಬಗ್ಗೆ ಕೆಲವರು ಬಹಳ ಒತ್ತಡ ಹಾಕುವದರಿಂದ, ಈ ಎರಡು ಪ್ರಸಿದ್ಧ ವಿಷಯಗಳನ್ನು ನಮೂದಿಸುತ್ತೇವೆ.

ಯೋಹಾನನು "ಅಂತಿಕ್ರಿಸ್ತನ" ಬಗ್ಗೆ ಬರೆದನು ಆದರೆ ಅವರಲ್ಲಿ "ಅನೇಕರು" ಬರುವರು ಎಂದು ಹೇಳಿದನು (1 ಯೋಹಾನ 2:18; 2 ಯೋಹಾನ 7), ಯೇಸುವು ದೇವರಿಂದ ಬಂದ ಕ್ರಿಸ್ತನೆಂಬುದನ್ನು (1 ಯೋಹಾನ 2:22; 4:3) ಮತ್ತು ಆತನು ದೇಹದಲ್ಲಿ ಬಂದನು ಎಂಬುದನ್ನು (2 ಯೋಹಾನ 7) ಅವರು ಅಲ್ಲಗಳೆಯುವರು. ಜಾಗತಿಕ ಸೈನ್ಯದ ಮಿಲಿಟರಿ ನಾಯಕರು ಯೇಸುವಿಗೆ ವಿರುದ್ಧವಾಗಿ ಹೋರಾಡುವಂತೆ ಇಲ್ಲವೇ 2 ಥೆಸಲೊನೀಕ 2:3ರಲ್ಲಿಯ "ಅಧರ್ಮಸ್ವರೂಪನಂತೆ" ಇವು ಪರಿಶುದ್ಧ ಬರಹಗಳಲ್ಲಿ ವಿವರಿಸಲ್ಪಟ್ಟಿರುವದಿಲ್ಲ. ಅದರ ಬದಲು ಅವರೆಲ್ಲರೂ ಧಾರ್ಮಿಕ ಮೋಸ ಗಾರರಂತೆ ವಿವರಿಸಲ್ಪಟ್ಟಿರುವರು (2 ಥೆಸಲೊನೀಕ 2:10; 2 ಯೋಹಾನ 7).

ಅರ್ಮಗೆದ್ದೋನ (ಪ್ರಕಟನೆ 16:14-16) ಬಹುಶಃ ಮೆಗಿದ್ದೋ ಬೆಟ್ಟ ಎಂದರ್ಥ, ಅನೇಕ ನಿರ್ಣಾಮಕ ಯುದ್ಧಗಳು ನಡೆದ ಸ್ಥಳ, ಯೇಸುವು ತನ್ನ ಸಾವಿರ - ವರ್ಷದ ಆಳ್ವಿಕೆಯನ್ನು ಪ್ರಾರಂಭಿಸುವ ಮೊದಲು, ಇಲ್ಲಿ ಯೇಸುವಿಗೆ ವಿರುದ್ಧವಾಗಿ ಯುದ್ಧ ಮಾಡಲು ಅಂತಿಕ್ರಿಸ್ತನು ಎಲ್ಲಾ ದುಷ್ಟರನ್ನು ಒಂದುಗೊಡಿಸುವನು. ದೆವ್ವಗಳು,

ಅಂತಿಕ್ರಿಸ್ತನಲ್ಲ, ಯುದ್ಧಕ್ಕಾಗಿ ಸೈನ್ಯಗಳನ್ನು ಕೂಡಿಸುವವು ಎಂದು ಪ್ರಕಟನೆ 16:14-16 ಹೇಳುತ್ತದೆ. ಯೋಚನೆಯಲ್ಲಿರುವ ಯುದ್ಧವು ಸತ್ಯದ ಮತ್ತು ದುಷ್ಟತ್ವದ ಮಧ್ಯದಲ್ಲಿ ಸಾಂಕೇತಿಕವಾದದ್ದಾಗಿದೆ, ಭೌತಿಕವಾದದ್ದಲ್ಲ.

ಅಂತಿಕ್ರಿಸ್ತರು ಧಾರ್ಮಿಕ ಮೋಸಗಾರರು; ಅವರು (ಗುಂಪಾಗಿ ಇಲ್ಲವೇ ವೈಯಕ್ತಿಕವಾಗಿ) ಅರ್ಮೆಗೆದ್ದೋನಿನೊಂದಿಗೆ ಸಂಬಂಧಿಸಿದ್ದರೆ, ಆಗ ಸತ್ಯಕ್ಕೆ ವಿರುದ್ಧವಾಗಿ ಆತ್ಮಿಕ ಯುದ್ಧ ದಲ್ಲಿ ಅವರು ತೊಡಗಿರುವರೆಂದು ನೋಡತಕ್ಕದ್ದು -ಸಮಯದ ಮೇಲೆ ಹೋರಾಡಿದ ಯುದ್ಧ, ಸಮಯದಲ್ಲಿ ಒಂದು ಘಟನೆಯಾಗಿರುವ ಯುದ್ಧವಲ್ಲ. ಮೇಲೆ ಹೇಳಿದ ಎರಡು ಯುದ್ಧಗಳ ಮಧ್ಯದಲ್ಲಿ ಬೈಬಲು ಯಾವುದೇ ಸಂಬಂಧವನ್ನು ಮಾಡದಿರುವದರಿಂದ, ಅವುಗಳನ್ನು ಕೂಡಿಸುವುದು ಕಲ್ಪನೆಯಾಗಿರುತ್ತದೆ.

## ಮುಕ್ತಾಯ

ಪರಿಶುದ್ಧ ಬರಹಗಳು ಕ್ರಿಸ್ತನ ಎರಡನೆಯ ಬರೋಣವನ್ನು ಕುರಿತಾಗಿ ನಮಗಿರುವ ಮಾಹಿತಿಯನ್ನು ಮಾತ್ರವೇ ಕೊಡುತ್ತವೆ. ಆತನ ಹಿಂದಿರುಗಿ ಬರುವಿಕೆಯ ಬಗ್ಗೆ ನಮ್ಮ ತಿಳುವಳಿಕೆಯಲ್ಲಿ ನಾವು ಪರಿಶುದ್ಧ ಬರಹಗಳಿಂದ ಮಾರ್ಗದರ್ಶನ ಹೊಂದತಕ್ಕದ್ದು; ಮನುಷ್ಯನ ಕಲ್ಪನೆಗಳಿಂದ ಅಲ್ಲ.

---

ಟಿಪ್ಪಣಿಗಳು

[1]ನೋಡಿರಿ ಮತ್ತಾಯ 11:16; 12:41, 42, 45; 23:36; ಮಾರ್ಕ 8:12; ಲೂಕ 11:29-32, 50, 51; 17:25. (ವಿಶೇಷವಾಗಿ ಗಮನಿಸಿರಿ ಮತ್ತಾಯ 23:36.) [2]ನೋಡಿರಿ ಮತ್ತಾಯ 7:22; 1 ಕೊರಿಂಥ 1:8; 5:5; 2 ಕೊರಿಂಥ 1:14; ಫಿಲಿಪ್ಪಿ 1:6, 10; 2:16; 1 ಥೆಸಲೊನೀಕ 5:2; 2 ಥೆಸಲೊನೀಕ 2:2; 2 ತಿಮೊಥೆ 1:18; 4:8; 2 ಪೇತ್ರ 3:10. [3]Eusebius, *Church History*, III.5. [4]ನೋಡಿರಿ ಯೆಶಾಯ 13:9, 10; 34:5-10; ಯೆಹೆಜ್ಕೇಲ 32:7, 8; ಯೋವೇಲ 2:10.

© 2009 Truth for Today